**ದಿನಾಂಕಃ 28-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿಡಿಪಿ ವಕೀಲರಿಂದಃ**

ನನ್ನ ತಂದೆ 1985 ರಲ್ಲಿ ಹುಲಿಕಟ್ಟ ಗ್ರಾಮದಲ್ಲಿ ಪೌತಿಯಾಗಿರುತ್ತಾರೆ. 1983 ರಲ್ಲಿ ನನ್ನ ತಂದೆ ಜೀವಂತವಿದ್ದರು ಎಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗಲೇ ಸರ್ವೇ ನಂ.113/1 ಬಿ, 114/4 ಎ, 118/3 ಬಿ ಮೂರು ಆಸ್ತಿಗಳು ನನ್ನ ಮತ್ತು ನನ್ನ ತಮ್ಮನ ಹೆಸರಿಗೆ ವಾರಸಾ ಆಧಾರದ ಮೇಲೆ ಬಂದಿರುತ್ತದೆ ಎಂದರೆ ಸರಿ. ಈ ಬಗ್ಗೆ ಡ-ನಂ.3324 ಮಂಜೂರು ಆಗಿರುತ್ತದೆ ಎಂದರೆ ಸರಿ. ನಂತರ ನಾವು ಬ್ಯಾಂಕ್ ಮತ್ತು ಸೊಸೈಟಿಯಲ್ಲಿ ಸಾಲ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜ ಮತ್ತು ಅವರ ಅಣ್ಣತಮ್ಮಂದಿರು ಯಾವಾಗ ವಿಭಾಗವಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1949 ನೇ ಇಸವಿಯಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಯವರ ತಂದೆ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಜನಿಸಿರಲಿಲ್ಲ ಎಂದರೆ ಸರಿ. ಆ ಕಾರಣದಿಂದ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ಸರ್ವೇ ನಂ.114/4 ಬ ಎರಡು ಎಕರೆ ಎರಡು ಗುಂಟೆ ಪ್ರತಿವಾದಿಯವರಿಗೆ ಹೋಗಿರುತ್ತದೆ ಎಂದರೆ ಸರಿ. ಸರ್ವೇ ನಂ.114/4 ಎ ಎರಡು ಎಕರೆ 8 ಗುಂಟೆ 2 ನೇ ವಾದಿಯವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿ. ಸರ್ವೇ ನಂ.113/6 ಬ ರ 16 ಗುಂಟೆ ಜಮೀನು ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ.113/1 ಅ ರ 2 ಎಕರೆ 37 ಗುಂಟೆ ಪ್ರತಿವಾದಿಯವರ ತಂದೆಯ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ.113/1 ಬ ರಲ್ಲಿ 2 ಎಕರೆ 38 ಗುಂಟೆ ನಮ್ಮ ತಂದೆಯ ಹೆಸರಿಗೆ ಬಂದಿರುತ್ತದೆ. ಸದರಿ 2 ಎಕರೆ 38 ಗುಂಟೆ ಈಗ ನನ್ನ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ.114/4 ರ 4 ಎಕರೆ 10 ಗುಂಟೆ ನಮ್ಮ ತಂದೆಯ ಪಾಲಿಗೆ ಬಂದಿದೆ ಎನ್ನುವ ಬಗ್ಗೆ ದಾಖಲೆಯನ್ನು ನಮ್ಮ ವಕೀಲರ ಬಳಿ ಕೊಟ್ಟಿರುತ್ತೇನೆ. ಸರ್ವೇ ನಂ.113/6 ಅ ರ 16 ಗುಂಟೆ ಜಾಗ ನಾಗಪ್ಪ ಕೆಂಚನಗೌಡರ ರವರ ಮಕ್ಕಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಾಗಪ್ಪನ ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ . ಅವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸರ್ವೇ ನಂ.114/4 ಬ ರ 2 ಎಕರೆ 2

ಗುಂಟೆ ಹಾಗೂ 113/6 ಬ ಕ್ಷೇತ್ರ 16 ಗುಂಟೆ ಪ್ರತಿವಾದಿಯವರ ತಂದೆ ಜೀವಂತವಿರುವ ಕಾಲಕ್ಕೆ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉಜ್ಜನಗೌಡನ ಮಕ್ಕಳು ಪಾಲು ವಿಭಾಗ ಮಾಡಿಕೊಂಡಿರುತ್ತಾರೋ ಅಥವಾ ಇಲ್ಲವೊ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಹುಲಿಕಟ್ಟಿ ಗ್ರಾಮದಲ್ಲೆ ವಾಸವಾಗಿರುತ್ತೇನೆ. ಸರ್ವೇ ನಂ.114/4 ಬ ಎರಡು ಎಕರೆ ಎರಡು ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾನೆ. ಸದರಿ ಜಮೀನಿನಲ್ಲಿ ಪ್ರತಿವಾದಿ ಬೋರವೆಲ್ ಹಾಕಿಸಿರುತ್ತಾರೆ ಎಂದರೆ ಸರಿ. ಅದರಲ್ಲಿ ಕಬ್ಬು, ಭತ್ತ ಇತರೆ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ಸರ್ವೇ ನಂ.114/4 ಬ ಎರಡು ಎಕರೆ ಎರಡು ಗುಂಟೆ ಜಮೀನನ್ನು 1949 ನೇ ಇಸವಿಯಿಂದಲೂ ಪ್ರತಿವಾದಿಗಳ ತಂದೆ ಹಾಗೂ ಪ್ರತಿವಾದಿಗಳು ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂ.13 ರಿಂದ 16 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ನಮ್ಮ ವಕೀಲರಿಗೆ ಆ ಬಗ್ಗೆ ಏನು ಮಾಹಿತಿ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂ.13 ರಿಂದ 16 ರಲ್ಲಿ ಹೇಳಿರುವ ಅಂಶಗಳು ವಾದ ಪತ್ರ ಮತ್ತು ಷಡ್ಯೂಲ್ ನಲ್ಲಿ ಇರುವುದಿಲ್ಲ ಎಂದರೆ ಸರಿ. ಆದ್ದರಿಂದ ಆ ಬಗ್ಗೆ ಯಾವುದೇ ಪರಿಹಾರ ಕೇಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಸರ್ವೇ ನಂ.2/1, 2/5 ಹಾಗೂ 80/3x-1 ಬಾಬ್ತು ನಾನು ಕಂದಾಯ ನ್ಯಾಯಾಲಯದಲ್ಲಿ ಯಾವುದೇ ಅರ್ಜಿಯನ್ನು ಹಾಕಿರುವುದಿಲ್ಲ. ಸದರಿ ಮೂರೂ ಸರ್ವೇ ನಂಬರಗಳ ಬಾಬ್ತು ಸಹಾಯಕ ಆಯುಕ್ತರು , ಹಾವೇರಿ ರವರ ಮುಂದೆ ಆರ್.ಟಿ.ಎಸ್.ಎ.ಪಿ.41/2022-23 ರ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪೀಲು ವಿಚಾರಣೆ ನಡೆದು ದಿಃ 19-12-2023 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಆದೇಶದ ಮೇಲೆ ಡಿ.ಸಿ. ಅಪೀಸ್ ನಲ್ಲಿ ಅಪೀಲು ಮಾಡಿರುತ್ತೇವೆ ಎಂದರೆ ಸರಿ. ಸದರಿ ಅಪೀಲು ನಂಬರ ನೆನಪಿರುವುದಿಲ್ಲ. ಆರ್.ಟಿ.ಎಸ್ ಆರ್.ಎ.ಸಿ.ಆರ್/99/2023-24 ರಂತೆ ಪುನರವಿಕ್ಷಣಾ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅಪೀಲು ವಿಚಾರಣೆಗೆ ಬಾಕಿ ಇರುತ್ತದೆ. ಸದರಿ ಅಪೀಲು ದಿಃ 15-11-2024 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಅಪೀಲು ಈಗಲೂ ವಿಚಾರಣೆಗೆ ಬಾಕಿ ಇರುತ್ತದೆ. ಆ ಅಪೀಲು ವಜಾ ಆಗಿದ್ದರೂ

ಸಹ ವಜಾ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 114/4 ಬ ಎರಡು ಎಕರೆ ಎರಡು ಗುಂಟೆ ಹಾಗೂ 113/6 ಬಿ 16 ಗುಂಟೆ ಜಾಗ 1949 ನೇ ಇಸವಿಯಿಂದಲೂ ಉಜ್ಜನಗೌಡ ಮತ್ತು ಪ್ರತಿವಾದಿಯವರ ಪಾಲಿಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಮತ್ತು ನನ್ನ ತಂದೆಯವರಿಗೆ ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ಕಿರುಕುಳ ಕೊಡುವುದಕ್ಕಾಗಿ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1949 ರಲ್ಲಿ ಮಂಜೂರಾದ ಡ-ನಂ.997 ರ ಬಗ್ಗೆ ನಾನಾಗಲೀ ಅಥವಾ ನನ್ನ ತಂದೆಯಾಗಲೀ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಪ್ರತಿವಾದಿಗಳಿಗೆ ವಿನಃಕಾರಣ ತೊಂದರೆ ಕೊಡುವುದಕ್ಕಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ಯಾವುದೇ ವಿವಾದ ಕಾರಣವೇ ಉದ್ಭವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ವಿಚಾರ ಎಲ್ಲಾ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.